## ಏನು ಮಾಡೋದು?

ಗುಂಡಿ ಎಂದಿನಂತೆ ತನ್ನ ಲೇಡಿಸ್ ಕ್ಲಬ್ ಕಡೆ ಹೋಗದೆ ಮುಖ ಸಪ್ಪಗೆ ಮಾಡಿಕೊಂಡು ಕ್ಯಾಂಡಿ ಕ್ರಷ್ ಆಡುತ್ತಿದ್ದಳು. ಪರಮೇಶಿಗೆ ಅಚ್ಚರಿ. ಕೇಳಿದ, 'ಯಾಕೆ ಡಾರ್ಲಿಂಗ್, ಕ್ಲಬ್‌ಗೆ ಹೋಗೋಲ್ವಾ?' ಎಂದು. ಅವಳು ಮೊಬೈಲ್ ಪಕ್ಕಕ್ಕಿಟ್ಟು ಇವನತ್ತ ಕೆಂಗಣ್ಣು ಬಿಟ್ಟು ಹೇಳಿದಳು, 'ಮುಂದಿನ ವಾರ ಅಲ್ಲಿ ಚುನಾವಣೆ. ನೀತಿಸಂಹಿತೆಯಂತೆ... ಇಂದಿನಿಂದ ಇನ್ನೊಬ್ಬರ ಬಗ್ಗೆ ಮಾತನಾಡುವಂತಿಲ್ಲ... ಮತ್ತೆ ಅಲ್ಲಿ ಹೋಗಿ ಇನ್ನೇನು ಮಾಡೋದು?' ಈಗ ಗುಂಡನಿಗೆ ಜ್ಞಾನೋದಯವಾಯಿತು. ಕನಿಕರದಿಂದ ಅವಳ ತಲೆ ನೇವರಿಸಿದ.

**ತಲಕಾಡು ಶ್ರೀನಿಧಿ**





ಕಲೆ: ಗಣೇಶ ಆಚಾರ್ಯ

## ಯಾರು ಧೈರ್ಯವಂತರು?

ಶೀನನ ಪತ್ನಿ ತನ್ನ ಪತಿಗೆ, 'ನಿಮಗಿಂತ ನಾನೇ ಧೈರ್ಯವಂತೆ ಕಣ್ರಿ' ಎಂದಳು. 'ನೀನು ಯಾವ ಮಹಾ ಧೈರ್ಯವಂತೆ?' ಶೀನನ ಪ್ರಶ್ನೆ. 'ನೋಡ್ರಿ ನೀವು ನನ್ನ ನೋಡೋದಕ್ಕೆ ಏಳೆಂಟು ಜನರ ಜೊತೆಯಾಗಿ ನಮ್ಮ ಮನೆಗೆ ಬಂದಿರಿ. ಆಮೇಲೆ ಮದುವೆಗೆ ನೂರಾರು ಜನರನ್ನು ಕರೆದುಕೊಂಡು ಬಂದಿರಿ. ಆದ್ರೆ ನಾನು ಮದುವೆಯಾದ ಮೇಲೆ ಒಬ್ಬಳೇ ನಿಮ್ಮ ಮನೆಗೆ ಬಂದೆ. ಹೇಳಿ, ಯಾರು ಧೈರ್ಯವಂತರು?'

**ಶಂಕರೇಗೌಡ ತುಂಬಕೆರೆ**